ಕೊಳವೆ ಬಾವಿಗಳು

2531(2737); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿ ಕುಡಿಯುವ ನೀರಿಗೆ ಕೊಳವೆ ಬಾವಿಗಳನ್ನು ಕೊರೆಯಿಸಿ ನೀರು ಪೂರೈಸಲು ಉದ್ದೇಶಿಸಲಾಗಿದೆಯೇ; ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಕೊರೆಯಿಸಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಇವುಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕವನ್ನು ಸರಬರಾಜು ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಕೊಳವೆ ಬಾವಿಗಳನ್ನು ಕೊರೆಯಿಸಲು ಸರ್ಕಾರ ಖರ್ಚುಮಾಡಿದ ಮೊತ್ತವೆಷ್ಟು; ಇವುಗಳು ಯಾವ ಅವಧಿಯಲ್ಲಿ ಕೊರೆಯಿಸಲ್ಪಟ್ಟಿವೆ (ವಿವರ ನೀಡುವುದು);

ಈ) ವಿದ್ಯುತ್ ಸಂಪರ್ಕ ಮಾಡಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಇಲಾಖೆ ಶುಲ್ಕ ಪಾವತಿಸಿ ಮನವಿ ಮಾಡಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಉ) ಹಾಗಿದ್ದಲ್ಲಿ, ಇವುಗಳಿಗೆ ಯಾವಾಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ; ಮಳೆಗಾಲ ಪ್ರಾರಂಭಗೊಳ್ಳುವುದರೊಳಗೆ ಸಂಪರ್ಕ ನೀಡದಿದ್ದಲ್ಲಿ, ಬೋರವೆಲ್‌ಗಳು ಉಪಯೋಗಕ್ಕೆ ಬರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿ ಕುಡಿಯುವ ನೀರನ್ನು ಪೂರೈಸಲು ಕಳೆದ ಒಂದು ವರ್ಷದಿಂದ 28355 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ).

ಆ) ಅವಶ್ಯಕತೆಗನುಗುಣವಾಗಿ ಅಂದರೆ ಕಿರು ನೀರು ಮತ್ತು ನಳ ನೀರು ಸರಬರಾಜು ಯೋಜನೆಗಳಿಗಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲಾಗಿದೆ. ಉಳಿದೆಡೆಗಳಲ್ಲಿ ಮಾರ್ಕ್3 ಕೈಪಂಪುಗಳನ್ನು ಅಳವಡಿಸಿದೆ. ಕೆಲವು ಕಡೆ ಸಿಂಗಲ್ ಫೇಸ್ ಮೋಟಾರ್ ಸಂಪರ್ಕ ಮಾಡಿದೆ. ಸಂಬಂಧಿಸಿದ ಇಲಾಖೆಗೆ ನಿಗದಿತ ಶುಲ್ಕವನ್ನು ಪಾವತಿಸಿ ಮನವಿ ಸಲ್ಲಿಸಿ ವಿದ್ಯುತ್ ಸಂಪರ್ಕವನ್ನು ಪಡೆಯಲಾಗುತ್ತಿದೆ.

ಇ) ಈ ಕೊಳವೆ ಬಾವಿಗಳನ್ನು ಕೊರೆಯಿಸಲು ₹ **26793.04** ಲಕ್ಷಗಳನ್ನು ವೆಚ್ಚ ಮಾಡಿದೆ. (ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ).

ಈ) ವಿದ್ಯುತ್ ಸರಬರಾಜು ಕಂಪನಿಗಳಿಗೆ ಅಗತ್ಯತೆಗನುಗುಣವಾಗಿ ನಿಗದಿತ ಶುಲ್ಕ ಪಾವತಿಸಿ ವಿದ್ಯುತ್ ಸಂಪರ್ಕಕ್ಕಾಗಿ ಬೇಡಿಕೆ ದಾಖಲಿಸಲಾಗಿದೆ.

ಉ) ವಿದ್ಯುತ್ ಸಂಪರ್ಕ ಕಲ್ಪಿಸಲು ಪ್ರಥಮ ಆದ್ಯತೆ ಮೇರೆಗೆ ಕ್ರಮ ವಹಿಸಲು ಸರ್ಕಾರದಿಂದ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ. ಮಳೆಗಾಲ ಪ್ರಾರಂಭಗೊಳ್ಳುವುದರೊಳಗೆ ವಿದ್ಯುತ್ ಸಂಪರ್ಕ ನೀಡದೇ ಇದ್ದಲ್ಲಿ ಬೋರ್ ವೆಲ್‌ಗಳು ಸದ್ಯಕ್ಕೆ ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನದಲ್ಲಿರುತ್ತದೆ. ಆದರೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಕ್ಷಣದಿಂದಲೇ ಅವುಗಳು ಉಪಯೋಗಕ್ಕೆ ಬರುತ್ತವೆ.

ಅನುಬಂಧ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:2737ರ ಲಗತ್ತು

Sl.No	Divisions	Total No. of Drilled during 2013-14	Expenditure Incurred (₹ in lacks)
1	Bangalore(u)	805	1420.07
2	Bangalore(r)	597	895.50
3	Ramanagaram	1193	1437.30
4	Kolar	1510	2656.00
5	Chickballapur	1007	1522.28
6	Tumkur	2054	2850.65
7	Chitradurga	1812	1247.12
8	Davanagere	849	594.34
9	Shimoga	477	436.25
10	Mysore	890	560.3
11	Manadya	1135	815.25
12	Chamarajnagar	1513	1279.00
13	Hassan	1102	864.30
14	Mangalore	419	525.44
15	Udupi	268	214.00
16	Chikamagalur	614	427.50
17	Kodagu	140	146.66
18	Belgaum	1358	1078.43
19	Bijapur	1566	1804.90
20	Bagalkote	573	590.28
21	Dharwad	2313	1675.85
22	Haveri	710	568.00
23	Gadag	702	556.19
24	Karwar	584	265.66
25	Gulbarga	749	510.06
26	Yadgir	210	136.50
27	Bidar	619	433.30
28	Raichur	946	559.56
29	Koppal	870	380.69
30	Bellary	770	341.66
TOTAL		**28355**	**26793.04**